## ದ ವಿಂಚಿ ರೊಬಾಟ್ ಬೆಲೆ 16 ಕೋಟಿ ರೂಪಾಯಿ

ಹೃದಯದ ಶಸ್ತ್ರಚಿಕಿತ್ಸೆ, ಗ್ಯಾಸ್ಟ್ರಿಕ್, ಮೂಳೆ, ಬೊಜ್ಜಿನ ಚಿಕಿತ್ಸೆ.. ಹೀಗೆ 15ಕ್ಕೂ ಅಧಿಕ ವಿಭಾಗಗಳಲ್ಲಿ ಬಳಸಲಾಗುತ್ತಿದೆ.

'ಕಿಡ್ನಿ ಶಸ್ತ್ರಚಿಕಿತ್ಸೆಯಲ್ಲಿ ಈ ರೊಬಾಟ್ ಬಳಸುವುದರಿಂದ ಹೆಚ್ಚು ಯಶಸ್ಸು ಸಾಧಿಸಬಹುದು. ಕಿಡ್ನಿ ತೆಗೆದು ಹಾಕುವ ಸಂದರ್ಭದಲ್ಲಿ, ಪ್ರಾಸ್ಟೇಟ್ ಕ್ಯಾನ್ಸರ್ ಚಿಕಿತ್ಸೆಯಲ್ಲಿ ಇದರ ಬಳಕೆ ಹೆಚ್ಚಿದೆ' ಎನ್ನುತ್ತಾರೆ ಈಗಾಗಲೇ ಇಂತಹ ಚಿಕಿತ್ಸೆಗಳನ್ನು ಮಾಡಿರುವ ನಾರಾಯಣ ಹೆಲ್ತ್‌ನ ತಜ್ಞ ವೈದ್ಯ ಡಾ.ಸೌರವ್.

ಹೌದು, ಕ್ಯಾನ್ಸರ್ ಚಿಕಿತ್ಸೆಯಲ್ಲಿ ಈ ರೊಬಾಟ್ ವ್ಯವಸ್ಥೆಯನ್ನು ಬಹಳ ಪರಿಣಾಮಕಾರಿಯಾಗಿ ಬಳಸಲಾಗುತ್ತಿದೆ. ಹೊಟ್ಟೆ, ಎದೆ.. ಹೀಗೆ ಯಾವುದೇ ಭಾಗವಾಗಿರಲಿ, ಕ್ಯಾನ್ಸರ್ ಗೆಡ್ಡೆ ಬೆಳೆದಿದ್ದರೆ ಅದನ್ನು ಹೆಚ್ಚು ಕರಾರುವಾಕ್ಕಾಗಿ ತೆಗೆದು ಹಾಕಬಹುದು. ಅಂದರೆ ಸಾಮಾನ್ಯ ಹಾಗೂ ಆರೋಗ್ಯಕರ ಜೀವಕೋಶಗಳನ್ನು ಈ ಪ್ರಕ್ರಿಯೆಯಲ್ಲಿ ಉಳಿಸಿಕೊಳ್ಳಬಹುದು. ಪ್ರಾಸ್ಟೇಟ್ ಕ್ಯಾನ್ಸರ್ ರೋಗಿಯಲ್ಲಿ ಕೀ– ಹೋಲ್ ಶಸ್ತ್ರಚಿಕಿತ್ಸೆಯಲ್ಲಿ ಈ ಕರಾರುವಾಕ್ ಪ್ರಮಾಣ ಶೇ. 90ರಷ್ಟಿತ್ತು. ಅದೂ ವೈದ್ಯರ ತಜ್ಞ ಅನುಭವವನ್ನು ಅವಲಂಬಿಸಿತ್ತು. ಈಗ ಈ ಪ್ರಮಾಣ ಇನ್ನೂ ಹೆಚ್ಚಿದೆ.

ಗೈನೆಕಾಲಜಿ ತೆಗೆದುಕೊಂಡರೆ ಕಟ್ಟಿಕೊಂಡ ಗರ್ಭನಾಳವನ್ನು ತೆರೆಯುವ ಶಸ್ತ್ರಚಿಕಿತ್ಸೆಯಲ್ಲಿ ಇದನ್ನು ವ್ಯಾಪಕವಾಗಿ ಬಳಸಲಾಗುತ್ತಿದೆ.

**ಬೆಂಗಳೂರಿನ ಕಿದ್ವಾಯಿ ಸ್ಮಾರಕ ಕ್ಯಾನ್ಸರ್ ಆಸ್ಪತ್ರೆಯಲ್ಲಿರುವ ದ ವಿಂಚಿ ರೊಬಾಟ್‌ನ ಸರ್ಜಿಕಲ್ ಕೈಗಳು.**






